ಕರ್ನಾಟಕ ಸರ್ಕಾರ (ಸಿ.ಆರ್.ಪಿ-67)

| | | | | | |
|---|---|---|---|---|---|
| ಹೇಳಿಕೆ ಹಾಳೆ (ಆರ್.ಪಿ ಸಂಖ್ಯೆ57) ನಮೂನೆ ಸಂಖ್ಯೆ4 (ಸಿವಿಲ್) | 1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ | | | | |
| | ಸಿ.ಸಿ ಸಂಖ್ಯೆ 802/2015 | | | | |
| | ಸಿಡಬ್ಲೂ | 2 | ಪಿಡಬ್ಲೂ | 1 | |

| | |
|---|---|
| ಸಾಕ್ಷಿಯ ಹೆಸರು | ಸುಭಾಷ ಸಾವಂತ ದೇಸಾಯಿ |
| ತಂದೆಯ ಹೆಸರು | ಸಾವಂತ |
| ವಯಸ್ಸು | 70 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮಲ್ಲಿಕವಾಡ |

ದಿನಾಂಕ 26/10/2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಈಗ 4 ವರ್ಷಗಳ ಹಿಂದೆ ಮಲ್ಲಿಕವಾಡ ಗ್ರಾಮದಲ್ಲಿ ಪೋಲೀಸರು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ಈಗ ಸದರಿ ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ ದಾಖಲೆಯು ಅಪರಾಧ ಸ್ಥಳದ ಪಂಚಾನಾಮೆಯಾಗಿದ್ದು ಅದನ್ನು ನಿಪಿಃ 1 ಎಂದು ಹಾಗೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿಃ 1ಎ ಎಂದು ಗುರುತಿಸಲಾಯಿತು. ಪೋಲೀಸರು ಮಲ್ಲಿಕವಾಡದ ಜೈನ ಶಿರೋನಾಥ ಮುನಿ ದಿಗಂಬರ ಜೈನ ಮಂದಿರದಲ್ಲಿ ದಾನ ಪೆಟ್ಟಿಗೆ ಒಡೆದು ಕಳ್ಳತನವಾಗಿದ್ದು ಆಗ ಅಲ್ಲಿ ಪೋಲೀಸರು ಬಂದಿದ್ದು ಅಲ್ಲಿ ಸ್ಥಳ ಪರಿಶೀಲನೆ ಮಾಡಿ ನಂತರ ನಿಪಿಃ 1 ಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಿಪಿಃ 1 ನ್ನು ಅಲ್ಲಿಯೇ ಬರೆದಿರುತ್ತಾರೆ. ಆದರೆ ನನಗೆ ಓದಿ ಹೇಳಿರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು).

ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಪೋಲೀಸರು ಪಂಚನಾಮೆಗೆ ಬಂದಾಗ ಚಾಸಾಃ 1 ಮತ್ತು 2 ರವರು ಸಹ ಸ್ಥಳದಲ್ಲಿ ಇದ್ದರು ಎಂದರೆ ಸರಿ. ಪೋಲೀಸರು ಒಂದು ಬ್ರೌನ್ ಕಲರದ ಹಾಗೂ ಒಂದು ಗ್ರೇ ಕಲರ್ ದ ಎರಡು ದಾನ ಪೆಟ್ಟಿಗೆಗಳನ್ನು ಜಪ್ತು ಮಾಡಿಕೊಂಡಿರುತ್ತಾರೆಂದರೆ ಸರಿ. ನಾನು ಸದರಿ ದಾನ ಪೆಟ್ಟಿಗೆಗಳನ್ನು ನೋಡಿದರೆ ಗುರುತಿಸುತ್ತೇನೆ. ಪೋಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದು ಆಗ ಸಮಯ 11-15 ರಿಂದ 12-30 ಆಗಿತ್ತು ಎಂದರೆ ಸರಿ. ಈಗ ಸದರಿ ದಾನ ಪೆಟ್ಟಿಗೆಗಳು ಗುಡಿಯಲ್ಲೇ ಇರುತ್ತವೆ.

(ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು)

ಮರು ವಿಚಾರಣೆಃ-  ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
1 ನೇ ಹೆಚ್ಚುವರಿ ಪ್ರ.ದ.ನ್ಯಾದಂ.ಗಳು ಚಿಕ್ಕೋಡಿ.